## *25. ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಕೆ.ಹೆಚ್ ಮೊಹಲ್ಲ ಶಿಕಾರಿಪುರ ತಾ॥*

**ಶಾಲೆಯ ಸಂಕ್ಷಿಪ್ತ ಮಾಹಿತಿ:–** ನಮ್ಮ ಶಾಲೆ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಕೆ.ಹೆಚ್ ಮೊಹಲ್ಲ ಶಿಕಾರಿಪುರ ಪಟ್ಟಣ, ಮಂಜೂರಾದ ಶಿಕ್ಷಕರ ಹುದ್ದೆ 5 ಆಗಿದ್ದು 5 ಜನ ಶಿಕ್ಷಕರು ಶಾಲಾ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಮ್ಮ ಶಾಲೆಯಲ್ಲಿ 1 ರಿಂದ 7ನೇ ತರಗತಿಯವರೆಗೆ ಇದ್ದು ಒಟ್ಟು ಮಕ್ಕಳು 72 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.



- **ಶಾಲಾ ಪರಿಸರ: –**

ನಮ್ಮ ಶಾಲಾ ಪರಿಸರವು ಹಸಿರೀಕರಣದಿಂದ ಕೂಡಿದ್ದು, ಕಿರು ಕೈತೋಟ ಹೊಂದಿದೆ. ಕೈ ತೋಟದಲ್ಲಿ ಹೊಂಗೆ, ಬಾಳೆ, ನೇರಳೆ, ನಲ್ಲಿಕಾಯಿ, ಬಾದಾಮಿ, ಪೊಪಾಯಿ, ಹಲಸಿನ ಮರ, ಪೇರಲ ಮರಗಳು ಇದ್ದು ತರತರದ ಹೂವಿನ ಗಿಡಗಳು ಇವೆ. ಗಿಡ ಮರದಲ್ಲಿ ಹೂವು, ಕಾಯಿಗಳು ನೋಡಲು ತುಂಬ ಸುಂದರವಾಗಿ ಕಾಣುತ್ತದೆ. ಶಾಲೆಯ ತೆಂಗಿನ ಮರಗಳಿಂದ ದೊರೆಯುವ ತೆಂಗಿನ ಕಾಯಿ ಮಕ್ಕಳ ಬಿಸಿಯೂಟಕ್ಕೆ ಬಳಸಲು ಅನುಕೂಲವಾಗಿದೆ.



## ➢ ಬಹದ್ದೂರು ಖಾನ್ ಘೋರಿ:–

ನಮ್ಮ ಶಾಲೆಯ ಆವರಣದ ಮುಂಬಾಗದಲ್ಲಿ 1413 ಇಸವಿಯಲ್ಲಿ ಕಟ್ಟಿದ ಬಹದ್ದೂರು ಖಾನ್ ಘೋರಿ ಇದ್ದು, ಇದು ನೋಡುಗರ ಮನ ಸೆಳೆಯುತ್ತದೆ. ಐತಿಹಾಸಿಕ ಸ್ಥಳವಾಗಿದ್ದು, ನೋಡಲು ಆಕರ್ಷಿಣೀಯವಾಗಿದೆ.



## ➢ ನಲಿಕಲಿ ಘಟಕ: –

ನಮ್ಮ ಶಾಲೆಯಲ್ಲಿ ಒಂದು ನಲಿಕಲಿ ಘಟಕ ಇದೆ. ಉರ್ದು ಮಾಧ್ಯಮದ 1 & 2ನೇ ತರಗತಿಯಲ್ಲಿ ಒಟ್ಟು ಮಕ್ಕಳು 21 ಇದ್ದಾರೆ. 1ನೇ ತರಗತಿಯಲ್ಲಿ 14 & 2ನೇ ತರಗತಿಯಲ್ಲಿ 7 ಮಕ್ಕಳು ಒಟ್ಟು ಮಕ್ಕಳು 21 ಶಾಲೆಗೆ ಹಾಜರಾಗುತ್ತಿದ್ದಾರೆ. ಸದರಿ ಘಟಕವನ್ನು ಶ್ರೀಯುತ ಯೂಸೂಫ್ ಬೇಗ್ ಸ.ಶಿ, ಹಾಗೂ ಶ್ರೀಮತಿ ನಸ್ರೀನ್ ಬಾನು ನಿರ್ವಹಿಸುತ್ತಿದ್ದಾರೆ. ಉರ್ದು ನಲಿಕಲಿ ತರಗತಿಯನ್ನು ನಲಿಕಲಿ ಪದ್ದತೆಯಲ್ಲಿಯೇ ಮಕ್ಕಳಿಗೆ ಅನುಕೂಲಿಸುತ್ತಿದ್ದಾರೆ. ಶ್ರೀಯುತ ಯೂಸುಪ್ ಬೇಗರವರು ಭಾಷೆ ಹಾಗೂ ಪ.ಅ.ವನ್ನು ಅನುಕೂಲಿಸುತ್ತಿದ್ದಾರೆ. ಶ್ರೀಮತಿ ನಸ್ರೀನ್ ಬಾನು, ಗಣಿತ ವಿಷಯವನ್ನು ಅನುಕೂಲಿಸುತ್ತಿದ್ದಾರೆ. ಈ.ಎಂ.ಪ್ರೇಮ ಸ.ಶಿ ಅವು ಕನ್ನಡ ವಿಷಯವನ್ನು ಅನುಕೂಲಿಸುತ್ತಿದ್ದಾರೆ.



## ನಲಿಕಲಿ ಮ್ಯಾಕ್ರೋ & ಮೈಕ್ರೋ ಅಧ್ಯಯನ

2018–19ನೇ ಸಾಲಿನಲ್ಲಿ ನಮ್ಮ ನಲಿಕಲಿ ಘಟಕವನ್ನು ಶ್ರೀಯುತ ಮೊಹಮ್ಮದ್ ನಾಸೀರ್ ಸಿ.ಆರ್.ಪಿ ಉರ್ದು–3 ಇವರು ನಲಿಕಲಿ ಘಟಕದ ಮ್ಯಾಕ್ರೋ ಅಧ್ಯಯನವನ್ನು ಮಾಡಿದರು. ಇದೇ ಅಧಾರದ ಮೇಲೆ ಶ್ರೀಯುತ ಮೊಹಮ್ಮದ್ ಅಸ್ಲಂ ಸಿ.ಆರ್.ಪಿ ಭದ್ರಾವತಿ ಇವರು ನಮ್ಮ ಶಾಲೆಗೆ ಬೆಳಗಿನ ಪ್ರಾರ್ಥನೆಗೆ ಹಾಜರಾಗಿ ಸಂಜೆಯವರೆಗೆ ಮೈಕ್ರೋ ಅಧ್ಯಯನ ಮಾಡಿದರು. ಈ ಅಧ್ಯಯನದಲ್ಲಿ ನಮ್ಮ ಶಾಲೆಯ ನಲಿಕಲಿ ಫಲಿತಾಂಶ 'ಎ' ಗ್ರೇಡ್ ಪಡೆಯಿತು.



- **ವಾಲ್ ಸ್ಲೇಟ್:–** ಎಲ್ಲ ಮಕ್ಕಳಿಗೂ ವಾಲ್ ಸ್ಲೇಟ್ ನಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿದ್ದು ಅವರುಗಳ ಹೆಸರುಗಳನ್ನು ನಮೂದಿಸಲಾಗಿದೆ, ಪ್ರತಿದಿನ ಮಕ್ಕಳು ಅದರ ಬಳಕೆ ಮಾಡುತ್ತಾರೆ.
- **ಗೋಡೆ ಬರಹ:–** ನಲಿಕಲಿ ನಮ್ಮ ಘಟಕವು ವರ್ಣರಂಜಿತವಾಗಿದ್ದು ಮೂರು ತರಗತಿಯ ಮಕ್ಕಳು ಕಲಿಯಬೇಕಾದ ಪ್ರಮುಖಾಂಶಗನ್ನು ಭಾಷೆ, ಗಣಿತಮ ಪರಿಸರ ಅಧ್ಯಯನ, ಇಂಗ್ಲೀಷ್ ವಿಷಯವಾರುವಾಗಿ ಗೋಡೆಗಳ ಮೇಲೆ ದುಂಡಾಗಿ ನೀಟಾಗಿ ಬರೆಸಲಾಗಿದೆ, ಪ್ರತಿದಿನ ಮಕ್ಕಳು ಬಿಡುವಿನ ವೇಳೆಯಲ್ಲಿ ಅದನ್ನು ಓದಿ ಬರೆದು ಮನನ ಮಾಡುತ್ತಾರೆ.
- **ಕಲಿಕಾ ಚಪ್ಪರ:–** ನಮ್ಮ ಕೋಠಡಿಯ ಕಲಿಕಾ ಚಪ್ಪರವು ಉತ್ತಮವಾಗಿದ್ದು ವಿಷಯವಾರು ಮಕ್ಕಳ ಚಟುವಟಿಕೆಗಳನ್ನು ಅಲ್ಲಿ ಪ್ರದರ್ಶಿಸಲಾಗಿದೆ, ಎಲ್ಲಾ ಮಕ್ಕಳೂ ಚಪ್ಪರದಲ್ಲಿ ತಮ್ಮನ್ನೂ ಗುರುತಿಸಿಕೊಳ್ಳುವಂತೆ ನಿಗಾ ವಹಿಸಲಾಗಿದೆ.
- **ಪ್ರಗತಿ ನೋಟ:–** ತರಗತಿವಾರು ವಿಷಯವಾರು ಪ್ರಗತಿನೋಟಗಳನ್ನು ತೂಗೂ ಹಾಕಿದ್ದು ಅವು ಮಕ್ಕಳ ಕೈಗೆಟುಕುವಂತೆ ಜೋಡಿಸಲಾಗಿದೆ, ಪ್ರತಿದಿನ ಕಲಿಕೆಯಲ್ಲಿ ತೊಡಗಿದ ಮಕ್ಕಳು ನಿರಂತರ ಮೌಲ್ಯಮಾಪನದಡಿ ತಮ್ಮ ಪ್ರಗತಿಯನ್ನು ತಾವೇ ದಾಖಲಿಸಿಕೊಳ್ಳುತ್ತಾರೆ.

- **ಹವಾಮಾನ ನಕ್ಷೆ:-** ಪರಿಸರ ಅಧ್ಯಯನ ಒಂದು ಪ್ರಮುಖ ಭಾಗವಾದ ಹವಾಮಾನ ನಕ್ಷೆಯ ದಾಖಲೀಕರಣ ಕ್ರೂಢೀಕರಣ ಸರಿಯಾದ ರೀತಿಯಲ್ಲಿ ಮಕ್ಕಳು ಶಿಕ್ಷಕರ ಮಾರ್ಗದರ್ಶಿನದಲ್ಲಿ ನಿರ್ವಹಿಸುತ್ತಾರೆ.
- **ಕಾರ್ಡಗಳು & ವಾಚಕಗಳು:-** ಮೂರು ತರಗತಿಯ ಮಕ್ಕಳಿಗೆ ಕಾರ್ಡಗಳು, ವಾಚಕರಗಳು ಕೈಗೆ ಸಿಗುವಂತೆ ರ್ಯಾಕಿನಲ್ಲಿ ವ್ಯವಸ್ಥಿತವಾಗಿ ವಿಷಯವಾರು ಜೋಡಿಸಲಾಗಿದೆ. ಮಕ್ಕಳು ತಾವೇ ಸ್ವತಹ ಮುಂದಿನ ಕಾರ್ಡಗಳನ್ನು ಎತ್ತಿಕೊಳ್ಳುತ್ತಾರೆ.
- **ಕಲಿಕೋಪಕರಣಗಳು:-** ನಲಿಕಲಿ ಕಿಟ್ ವಿವಿಧ ಚಟುವಟಿಕೆಗಳ ,ಮೈಲುಗಲ್ಲುವಾರು ಮಿಂಚಿನ ಪಟ್ಟಿಗಳ ಡಬ್ಬಿಗಳು, ವಿವಿಧ ಕಲಿಕೋಪಕರಣಗಳನ್ನು ಮಕ್ಕಳಿಗೆ ಸಿಗುವಂತೆ ಜೋಡಿಸಲಾಗಿದೆ, ಮಕ್ಕಳು ಬಳಸುತ್ತಾರೆ.
- **ಸಿ.ಪಿ.ಎಫ್ ನಿರ್ವಹಣೆ:-** ಮಕ್ಕಳ ಕಲಿಕಾ ದಾಖಲೀಕರಣ ಮತ್ತು ದೃಢೀಕರಣಗಳೂ ಸಿ.ಪಿ.ಎಫ್ ನಲ್ಲಿ ತರಗತಿವಾರು ವಿಷಯವಾರು ನಡೆಯುತ್ತಿದ್ದು ರ್ಯಾಕಿನಲ್ಲಿ ವ್ಯವಸ್ಥಿತವಾಗಿ ಜೋಡಿಸಲಾಗಿದೆ.
- **ಕಲಿಕಾ ತಟ್ಟೆಗಳು:-** ಮೂರು ವಿಷಯಗಳು ತಟ್ಟಗಳಿಗೆ ಸೂಕ್ತ ಸ್ಥಳಾವಕಾಶ ಕಲ್ಪಿಸಿದ್ದು ಮಕ್ಕಳೇ ಅದನ್ನು ಹಾಕಿ ನಿರ್ವಹಿಸುತ್ತಾರೆ.
- **ಪೊಪೆಟ್ ಶೋ:-** ಪೊಪೆಟ್ ಶೋ ನ ಎಲ್ಲಾ ಉಪಕರಣ, ಪೊಪೆಟ್ ಗಳೂ ಇದ್ದು ಸಂದರ್ಭಾನುಸಾರ ಬಳಸಲಾಗುತ್ತಿದೆ.
- **ಅಭ್ಯಾಸ ಪುಸ್ತಕ:-** ಎಲ್ಲ ಮಕ್ಕಳಿಗೂ ಅಭ್ಯಾಸ ಪುಸ್ತಕವಿದ್ದು ಮಕ್ಕಳು ಅದನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಿ ಶಿಕ್ಷಕರ ಸಹಿ ಪಡೆಯುತ್ತಿದ್ದಾರೆ.
- **ನಲಿಕಲಿ ಶಿಕ್ಷಕರ ಡೈರಿ:** ಶಿಕ್ಷಕರು ಪ್ರತಿದಿನ ಮಕ್ಕಳ ಪ್ರಗತಿಯನ್ನು ಡೈರಿಯಲ್ಲಿ ನಮೂದಿಸಿಕೊಳ್ಳುತ್ತಿದ್ದಾರೆ.

**ವಾಲ್ ಸ್ಲೇಟ್ ನ ಲಭ್ಯತೆ, ಅವಕಾಶ ಹಾಗೂ ಬಳಕೆ ಸಮರ್ಪಕವಾಗಿ ಆಗುತ್ತಿದೆ.**

